**All India Radio: Bangalore**
**National Bulletin In Kannada**
**21.05.2025  01.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**21.05.2025  01.10 p.m.**

ಮುಖ್ಯಾಂಶಗಳು

೧. ಜಾಗತಿಕ ಏರಿಳಿತಗಳ ಹೊರತಾಗಿ ದರ ಶೇಕಡ ೬.೪ ರಿಂದ ೬.೫ ಕ್ಕೆ ಏರಿಕೆ ಸಾಧ್ಯತೆ - ಎಸ್‌ಬಿಐ ವರದಿ

೨. ಕರ್ನಾಟಕದ ಐದು ಜಿಲ್ಲೆಗಳು ಸೇರಿದಂತೆ ದೇಶದ ೧೦೩ ಅಮೃತ್ ರೈಲ್ವೆ ನಿಲ್ದಾಣಗಳನ್ನು ನಾಳೆ ಪ್ರಧಾನಿ ನರೇಂದ್ರ ಮೋದಿ ಲೋಕಾರ್ಪಣೆ

೩. ಹಣ್ಣು ಮಾಗಿಸುವ ರಾಸಾಯನಿಕಗಳ ಅಕ್ರಮ ಬಳಕೆ ತಪಾಸಣೆ ನಡೆಸುವಂತೆ ಆಹಾರ ಸುರಕ್ಷತಾ ಪ್ರಾಧಿಕಾರ ರಾಜ್ಯಗಳಿಗೆ ಸೂಚನೆ

೪. ಐಪಿಎಲ್ ಟಿ-೨೦ ಕ್ರಿಕೆಟ್; ವಾಂಖೆಡೆಯಲ್ಲಿಂದು ಮುಂಬೈ ಇಂಡಿಯನ್ಸ್- ಡೆಲ್ಲಿ ಕ್ಯಾಪಿಟಲ್ಸ್ ಮುಖಾಮುಖಿ

***********

ಜಾಗತಿಕ ಏರಿಳಿತಗಳಿಂದ ಉಂಟಾದ ಹವಾಮಾನ ಪರಿಣಾಮಗಳ ಹೊರತಾಗಿಯೂ, ಭಾರತದ ಆರ್ಥಿಕತೆಯು ಹೆಚ್ಚಾಗಿ ಸ್ಥಿತಿಸ್ಥಾಪಕತ್ವವನ್ನು ಕಾಯ್ದುಕೊಂಡಿದೆ. ೨೦೨೫ನೇ ಸಾಲಿನ ನಾಲ್ಕನೇ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರ ಶೇಕಡ ೬.೪ ರಿಂದ ೬.೫ ಕ್ಕೆ ತಲುಪಲಿದೆ ಎಂದು ಸ್ಟೇಟ್ ಆಫ್ ಇಂಡಿಯ್-ಎಸ್‌ಬಿಐ ಇಂದು ವರದಿ ಮಾಡಿದೆ.ಜಿಡಿಪಿಯನ್ನು ಸಂಖ್ಯಾಶಾಸ್ತ್ರೀಯವಾಗಿ ಅಂದಾಜು ಮಾಡಲು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಆರ್ಥಿಕ ಸಂಶೋಧನಾ ವಿಭಾಗವು ಉದ್ಯಮ ಚಟುವಟಿಕೆ, ಸೇವಾ ಚಟುವಟಿಕೆ ಮತ್ತು ಜಾಗತಿಕ ಆರ್ಥಿಕತೆಗೆ ಸಂಬಂಧಿಸಿದ ೩೬ ಅಧಿಕ ಆವರ್ತಿತ ಸೂಚಕಗಳೊಂದಿಗೆ 'ನೌಕಾಸ್ಟಿಂಗ್ ಮಾದರಿ'ಯನ್ನು ನಿರ್ಮಿಸಿದೆ. ಈ ಮಾದರಿಯು ಕ್ರಿಯಾತ್ಮಕ ಅಂಶಗಳ ಬಳಸಿಕೊಂಡು ೨೦೧೩ರ ಆರ್ಥಿಕ ವರ್ಷದ ೪ನೇ ತ್ರೈಮಾಸಿಕದಿಂದ ೨೦೨೩ ರ ಆರ್ಥಿಕ ವರ್ಷದ ೨ ತ್ರೈಮಾಸಿಕದವರೆಗಿನ ಎಲ್ಲಾ ಅಧಿಕ ಆವರ್ತಿತ ಸೂಚಕಗಳ ಸಾಮಾನ್ಯ, ಪ್ರತಿನಿಧಿತ ಮತ್ತು ಸುಪ್ತ ಅಂಶವನ್ನು ಅಂದಾಜು ಮಾಡುತ್ತದೆ. "ನಮ್ಮ 'ನೌಕಾಸ್ಟಿಂಗ್

ಮಾದರಿ’ಯ ಪ್ರಕಾರ, ೨೦೨೫ನೇ ಸಾಲಿನ ನಾಲ್ಕನೇ ತ್ರೈಮಾಸಿಕಕ್ಕೆ ಅಂದಾಜು ಮಾಡಲಾದ ಜಿಡಿಪಿ ಬೆಳವಣಿಗೆ ದರ ಶೇಕಡ ೬.೪ ರಿಂದ ೬.೫ ರ ಆಸುಪಾಸಿನಲ್ಲಿರಬೇಕು ಎಂದು ಎಸ್‌ಬಿಐನ ಗ್ರೂಪ್ ಮುಖ್ಯ ಆರ್ಥಿಕ ಸಲಹೆಗಾರ್ತಿ ಡಾ. ಸೌಮ್ಯ ಕಾಂತಿ ಘೋಷ್ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ನಾಳೆ ರಾಜಸ್ಥಾನದ ಬಿಕನೇರ್‌ನಲ್ಲಿ ೨೬ ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ಬಹು ಅಭಿವೃದ್ಧಿ ಯೋಜನೆಗಳ ಲೋಕಾರ್ಪಣೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.ಈ ಯೋಜನೆಗಳು ರೈಲ್ವೆ, ರಸ್ತೆಮಾರ್ಗಗಳು, ವಿದ್ಯುತ್, ನೀರು, ಹೊಸ ಮತ್ತು ನವೀಕರಿಸಬಹುದಾದ ಇಂಧನ ಕ್ಷೇತ್ರಗಳನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.ತಮ್ಮ ಭೇಟಿಯ ಸಮಯದಲ್ಲಿ ಪ್ರಧಾನಿಯವರು, ಕರ್ನಾಟಕದ ಗೋಕಾಕ, ಧಾರವಾಡ,   ಮುನಿರಾಬಾದ್, ಗದಗ, ಬಾಗಲಕೋಟೆ ಸೇರಿದಂತೆ ದೇಶದ ೧೮ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ೮೬ ಜಿಲ್ಲೆಗಳಲ್ಲಿ ೧೦೩ ಪುನರಾಭಿವೃದ್ಧಿಗೊಂಡ ಅಮೃತ್ ರೈಲ್ವೆ ನಿಲ್ದಾಣಗಳನ್ನು ಉದ್ಘಾಟಿಸಲಿದ್ದಾರೆ.

***********

ಅನುಮತಿಯಿಲ್ಲದ ಹಣ್ಣು ಮಾಗಿಸುವ ಏಜೆಂಟ್‌ಗಳ ಅಕ್ರಮ ಬಳಕೆ, ಹಾಗೆಯೇ ಸಿಂಥೆಟಿಕ್ ಬಣ್ಣಗಳು ಅಥವಾ ಅನುಮತಿಯಿಲ್ಲದ ಮೇಣದಿಂದ ಹಣ್ಣುಗಳಿಗೆ ಬಣ್ಣ ಲೇಪನ ಮಾಡುವುದರ ಕುರಿತು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಪಾಸಣೆ ತೀವ್ರಗೊಳಿಸಬೇಕು ಮತ್ತು ತಡೆಯಲು ವಿಶೇಷ ಜಾರಿ ಡ್ರೈವ್‌ಗಳನ್ನು ಕೈಗೊಳ್ಳಬೇಕೆಂದು ಭಾರತೀಯ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಪ್ರಾಧಿಕಾರ ಒತ್ತಾಯಿಸಿದೆ.ಪ್ರಾಧಿಕಾರದ ಅಧಿಸೂಚನೆಯಲ್ಲಿ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಹಾರ ಸುರಕ್ಷತಾ ಆಯುಕ್ತರು ಮತ್ತು ಪ್ರಾದೇಶಿಕ ನಿರ್ದೇಶಕರು, ಕ್ಯಾಲ್ಸಿಯಂ ಕಾರ್ಬೈಡ್‌ನಂತಹ ಮಾಗಿಸುವ ಏಜೆಂಟ್‌ಗಳ ಅಕ್ರಮ ಬಳಕೆಯನ್ನು ತಡೆಯಲು ಹಣ್ಣಿನ ಮಾರುಕಟ್ಟೆಗಳು ಮತ್ತು ಮಂಡಿಗಳ ಮೇಲೆ ಕಟ್ಟುನಿಟ್ಟಿನ ನಿಗಾ ವಹಿಸಲು ಒತ್ತಾಯಿಸಿದೆ.ಸುರಕ್ಷಿತ ಮತ್ತು ಅನುಸರಣಾ ಮಾಗಿಸುವ ಅಭ್ಯಾಸಗಳನ್ನು ಖಚಿತಪಡಿಸಿಕೊಳ್ಳಲು ಪ್ರಾಧಿಕಾರವು ಎಲ್ಲಾ ಆಹಾರ ವ್ಯಾಪಾರ ನಿರ್ವಾಹಕರನ್ನು ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನಗಳನ್ನು ಪಾಲಿಸುವಂತೆ ಒತ್ತಾಯಿಸಿದೆ. ಯಾವುದೇ ನಿಯಮಗಳ ಉಲ್ಲಂಘನೆಯು

ಆಹಾರ ಭದ್ರತಾ ಕಾಯ್ದೆ, ೨೦೦೬ ರ ಅಡಿಯಲ್ಲಿ ಕಠಿಣ ದಂಡದ ಕ್ರಮಕ್ಕೆ ಕಾರಣವಾಗುತ್ತದೆ ಎಂದು ಪ್ರಾಧಿಕಾರವು ಪುನರುಚ್ಚರಿಸಿದೆ.

***********

ಕನ್ನಡದ ಹೆಸರಾಂತ ಸಾಹಿತಿ ಹಾಸನ ಮೂಲದ ಬಾನು ಮುಷ್ತಾಕ್ ಅವರು ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಅನುವಾದಿತ ಕೃತಿಗಳಿಗೆ ನೀಡಲಾಗುವ ಪ್ರತಿಷ್ಠಿತ ಪ್ರಶಸ್ತಿಗೆ ಬಾನು ಮುಷ್ತಾಕ್ ಅವರ ಸಣ್ಣಕಥೆಗಳ ಸಂಕಲನ 'ಹಾರ್ಟ್ ಲ್ಯಾಂಪ್' ಗೆ ಈ ಪ್ರಶಸ್ತಿ ಲಭಿಸಿದೆ. ಕೃತಿಯನ್ನು ಮಡಿಕೇರಿ ಮೂಲದ ದೀಪಾ ಭಸ್ತಿ ಅವರು ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಲಂಡನ್ನಿನ ಟೇಟ್ ಮಾರ್ಡನ್‌ನಲ್ಲಿ ನಿನ್ನೆ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿದ ಬಾನು ಮುಷ್ತಾಕ್, ತಮ್ಮ ಗೆಲುವು ವೈವಿಧ್ಯತೆಗೆ ದೊರೆತ ಜಯ ಎಂದು ಬಣ್ಣಿಸಿದ್ದಾರೆ. ೧೯೬೯ ರಲ್ಲಿ ಆರಂಭವಾದಾಗಿನಿಂದ ಇದೇ ಮೊದಲ ಬಾರಿಗೆ ಕನ್ನಡದ ಕೃತಿಯೊಂದಕ್ಕೆ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ದೊರೆತಂದಾಗಿದ್ದು, ಪ್ರಶಸ್ತಿಯು ೫೭ ಲಕ್ಷ ೨೮ ಸಾವಿರ ರೂಪಾಯಿ ನಗದು ಬಹುಮಾನ ಒಳಗೊಂಡಿದೆ.ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಶ್ರೇಷ್ಠತೆಯ ಧ್ವಜವನ್ನು ಹಾರಿಸಿದ ಬಾನು ಮುಷ್ತಾಕ್ ಅವರನ್ನು ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಹಲವು ಗಣ್ಯರು ಅಭಿನಂದನೆ ಸಲ್ಲಿಸಿದ್ದಾರೆ. ವಿ.ಎಸ್.ನೈಪಾಲ್, ಸಲ್ಮಾನ್ ರಶ್ದಿ, ಅರುಂಧತಿ ರಾಯ್, ಕಿರಣ್ ದೇಸಾಯಿ, ಅರವಿಂದ್ ಅಡಿಗ ಮತ್ತು ಗೀತಾಂಜಲಿ ಶ್ರೀ ಈ ಪ್ರತಿಷ್ಠಿತ ಪ್ರಶಸ್ತಿ ಪಡೆದ ಇತರ ಭಾರತೀಯ ಬರಹಗಾರರಾಗಿದ್ದಾರೆ.

***********

ಸಾಂಪ್ರದಾಯಿಕವಾಗಿ ನಿರ್ಮಿಸಲಾದ ಪ್ರಾಚೀನ ಹೊಲಿಗೆ ಹಡಗು- ಐಎನ್‌ಎಸ್‌ಸಿ ಕೌಂಡಿನ್ಯ ಭಾರತೀಯ ನೌಕಾಪಡೆಯು ಇಂದು ಕರ್ನಾಟಕದ ನೌಕಾ ನೆಲೆಗೆ ಸೇರ್ಪಡೆಯಾಗಲಿದೆ.ಈ ಕಾರ್ಯಕ್ರಮದಲ್ಲಿ ಕೇಂದ್ರ ಸಾಂಸ್ಕೃತಿಕ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದಾರೆ. ಹೊಲಿಗೆ ಹಾಕಿ ಸಿದ್ಧಪಡಿಸಿದ ಹಡಗು ಅಜಂತಾ ಗುಹೆಗಳ ವರ್ಣಚಿತ್ರದಿಂದ ಪ್ರೇರಿತವಾಗಿದ್ದು ೫ ನೇ ಶತಮಾನದ ಹಡಗಿನ ಪ್ರತಿಕೃತಿಯಾಗಿದೆ.ಸಾಂಪ್ರದಾಯಿಕ ಹಡಗು

ನಿರ್ಮಾತೃ ಬಾಬು ಶಂಕರನ್ ನೇತೃತ್ವದ ಕೇರಳದ ಕುಶಲಕರ್ಮಿಗಳು ಸಂಪೂರ್ಣವಾಗಿ ಸಾಂಪ್ರದಾಯಿಕ ವಿಧಾನದಿಂದ ಕಚ್ಚಾ ವಸ್ತುಗಳನ್ನು ಬಳಸಿ ಇದನ್ನು ತಯಾರು ಮಾಡಿದ್ದಾರೆ.

***********

ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಪುಣ್ಯತಿಥಿ ಇಂದು. ೧೯೮೪ ರಿಂದ ೧೯೮೯ ರವರೆಗೆ ಭಾರತದ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ರಾಜೀವ್ ಗಾಂಧಿ, ತಮ್ಮ ತಾಯಿ ಆಗಿನ ಪ್ರಧಾನಿ ಇಂದಿರಾ ಗಾಂಧಿಯವರ ಹತ್ಯೆಯ ನಂತರ ೪೦ ನೇ ವಯಸ್ಸಿನಲ್ಲಿ ಅಧಿಕಾರ ವಹಿಸಿಕೊಂಡರು. ಈ ಮೂಲಕ ಭಾರತೀಯ ಇತಿಹಾಸದಲ್ಲಿ ಅತ್ಯಂತ ಕಿರಿಯ ಪ್ರಧಾನಿ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ.ರಾಜೀವ್ ಗಾಂಧಿ ಅವರ ಪುಣ್ಯತಿಥಿಯ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಇಂದು ಅವರಿಗೆ ಗೌರವ ನಮನ ಸಲ್ಲಿಸಿದ್ದಾರೆ.ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಹಿರಿಯ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ನವದೆಹಲಿಯ ವೀರ್ ಭೂಮಿಯಲ್ಲಿ ಮಾಜಿ ಪ್ರಧಾನಿಗೆ ಗೌರವ ಸಲ್ಲಿಸಿದರು.

***********

ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಡೆನ್ಮಾರ್ಕ್‌ನ ಬದ್ಧತೆ ಹಾಗೂ ದೇಶಕ್ಕೆ ಆಗಮಿಸಿದಾಗ ಅವರಿಗೆ ದೊರೆತ ಆತ್ಮೀಯ ಸ್ವಾಗತಕ್ಕಾಗಿ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಕೃತಜ್ಞತೆ ಸಲ್ಲಿಸಿದ್ದಾರೆ.ಸಚಿವರನ್ನು ಡ್ಯಾನಿಶ್ ಪ್ರಧಾನಿ ಮೆಟ್ಟೆ ಫ್ರೆಡೆರಿಕ್ಸೆನ್ ಬರಮಾಡಿಕೊಂಡರು. ಉಭಯ ನಾಯಕರ ನಡುವೆ, ಭಾರತ-ಡೆನ್ಮಾರ್ಕ್ ಹಸಿರು ಕಾರ್ಯತಂತ್ರದ ಪಾಲುದಾರಿಕೆಯನ್ನು ಮುನ್ನಡೆಸುವ ಬಗ್ಗೆ ಪ್ರಮುಖ ಚರ್ಚೆಗಳು ನಡೆದವು.ಈ ಚರ್ಚೆಗಳು, ದ್ವಿಪಕ್ಷೀಯ ಸಹಕಾರವನ್ನು ಗಾಢವಾಗಿಸಲು ಮತ್ತು ಜಾಗತಿಕ ಸವಾಲುಗಳನ್ನು ಎದುರಿಸಲು ಎರಡೂ ರಾಷ್ಟ್ರಗಳ ಬದ್ಧತೆಯನ್ನು ಒತ್ತಿಹೇಳುತ್ತದೆ.

***********

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇದೇ ತಿಂಗಳ ೨೫ ರಂದು ಪ್ರಸಾರವಾಗಲಿರುವ ಆಕಾಶವಾಣಿಯ ಜನಪ್ರಿಯ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ದೇಶ-

ವಿದೇಶದಲ್ಲಿರುವ ಭಾರತೀಯರೊಂದಿಗೆ ತಮ್ಮ ಮನದ ಮಾತನ್ನು ಹಂಚಿಕೊಳ್ಳಲಿದ್ದಾರೆ. ಇದು 'ಮನ್ ಕಿ ಬಾತ್' ನ ೧೨೨ನೇ ಆವೃತ್ತಿಯಾಗಿದೆ. ಉಚಿತ ದೂರವಾಣಿ ಸಂಖ್ಯೆ ೧೮೦೦-೧೧-೭೮೦೦ ಮೂಲಕ ಮನದಮಾತಿನ ಸಂಚಿಕೆಗೆ ಸಾರ್ವಜನಿಕರು ತಮ್ಮ ಆಲೋಚನೆ, ಸಲಹೆಗಳನ್ನು ಸಲ್ಲಿಸಬಹುದಾಗಿದೆ. ನರೇಂದ್ರ ಮೋದಿ ಆಪ್ ಅಥವಾ ಮೈಗೌ ಓಪನ್ ಫೋರಂ ಮೂಲಕ ಜಾಲತಾಣದಲ್ಲಿ ಜನರು ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಬಹುದು. ಮುಂಬರುವ ಸಂಚಿಕೆಗೆ ಸಲಹೆಗಳನ್ನು ಈ ತಿಂಗಳ ೨೩ ರವರೆಗೆ ಸ್ವೀಕರಿಸಲಾಗುತ್ತದೆ.

***********

ಪಂಜಾಬ್‌ನ ಅಮೃತಸರದ ಗಡಿ ಪ್ರದೇಶದಲ್ಲಿ ನಿನ್ನೆ ಸಂಜೆ ಗಡಿ ಭದ್ರತಾ ಪಡೆ-ಬಿಎಸ್‌ಎಫ್ ಪಾಕಿಸ್ತಾನಿ ಒಳನುಸುಳುಕಾರರನ್ನು ಬಂಧಿಸಿದೆ. ಅಂತರರಾಷ್ಟ್ರೀಯ ಗಡಿ ದಾಟಿದ ವ್ಯಕ್ತಿಯೊಬ್ಬನ ಅನುಮಾನಾಸ್ಪದ ಚಲನವಲನವನ್ನು ಗಮನಿಸಿದ ಸೈನಿಕರು ಗಡಿ ಭದ್ರತಾ ಬೇಲಿಯ ಬಳಿಯಲ್ಲಿ ಜಮಾಯಿಸಿದರು. ತ್ವರಿತ ಪ್ರತಿಕ್ರಿಯೆಯಾಗಿ, ಪಡೆಗಳು ಒಳನುಸುಳುಕಾರರನ್ನು ತಡೆದು ಬಂಧಿssಸಿವೆ.

***********

ಇದೇ ೨೯ ರಿಂದ ಜೂನ್ ೨ ರವರೆಗೆ ತಾಪಮಾನವು ೫೫ ಡಿಗ್ರಿ ಸೆಲ್ಸಿಯಸ್‌ಗೆ ಏರಿಕೆಯಾಗುವ ಸಾಧ್ಯತೆಯ ಕುರಿತು ಕೇಂದ್ರ ಸರ್ಕಾರವು ಎಚ್ಚರಿಕೆ ನೀಡಿದೆ ಎಂಬ ವದಂತಿಗಳನ್ನು ವಿವಿಧ ಸಾಮಾಜಿಕ ಮಾಧ್ಯಮ ಚಾನೆಲ್‌ಗಳು ಪ್ರಕಟಿಸಿದ ಪೋಸ್ಟ್‌ಗಳನ್ನು ಸರ್ಕಾರ ತಳ್ಳಿಹಾಕಿದೆ. ಸರ್ಕಾರ ಅಂತಹ ಯಾವುದೇ ಅಧಿಸೂಚನೆಯನ್ನು ಹೊರಡಿಸಿಲ್ಲ ಎಂದು ಪತ್ರಿಕಾ ಮಾಹಿತಿ ಬ್ಯೂರೋದ ಸತ್ಯ ಪರಿಶೀಲನಾ ಘಟಕವು ಸ್ಪಷ್ಟಪಡಿಸಿದ್ದು, ನಾಗರಿಕರು ಭಾರತ ಹವಾಮಾನ ಇಲಾಖೆಯ ಅಧಿಕೃತ ವೆಬ್‌ಸೈಟ್ ಅನ್ನು ಪರಿಶೀಲಿಸುವಂತೆ ಸೂಚಿಸಿದೆ.

***********

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್-ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು

ಸೆಣಸಲಿವೆ. ಪಂದ್ಯ ರಾತ್ರಿ ೭.೩೦ ಕ್ಕೆ ಆರಂಭವಾಗಲದೆ. ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಿನ್ನೆ ರಾತ್ರಿ ನಡೆದ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡವು ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಆರು ವಿಕೆಟ್‌ಗಳಿಂದ ಮಣಿಸಿದೆ.

*******END********